※ ಅನುಬಂಧ-1 ※

ಮೂಡಬಿದ್ರೆಯ ಕಿನ್ನಿಗೋಳಿಯು ಪಟ್ಟಣಕ್ಕೆ ಆಸ್ಪತ್ರೆ ಮಂಜೂರಾತಿ

1155 (1619) ಶ್ರೀ ಅಭಯಚಂದ್ರ ಕೆ (ಮೂಡಬಿದ್ರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿನ್ನಿಗೋಳಿಯು ಬೆಳೆಯುತ್ತಿರುವ ಪಟ್ಟಣವಾಗಿದ್ದು ಇಲ್ಲಿಗೊಂದು ಆಸ್ಪತ್ರೆಯನ್ನು ಮಂಜೂರು ಮಾಡಲಾಗುವುದೇ;

ಆ) ಕಿನ್ನಿಗೋಳಿಯ ಒಂದು ವಿಶಾಲ ಗ್ರಾಮ ಪಂಚಾಯತ್ ಆಗಿದ್ದು ಇದಕ್ಕೆ ಹೊಂದಿಕೊಂಡಿರುವ ಐಕಳ ಗ್ರಾಮ ಪಂಚಾಯತ್ ಇದ್ದು ಇಲ್ಲಿಯ ಬಡವರ ಅನುಕೂಲತೆಗಾಗಿ ಒಂದು ಸರ್ಕಾರಿ ಆಸ್ಪತ್ರೆ ಬೇಡಿಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಆಸ್ಪತ್ರೆಯನ್ನು ಮಂಜೂರು ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಭಾರತ ಸರ್ಕಾರದ ಮಾರ್ಗ ಸೂಚಿಗನು ಗುಣವಾಗಿ ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಪ್ರಸ್ತಾವನೆ ಬಂದಿಲ್ಲ.

ಆ) ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ವಿದ್ಯಾರ್ಥಿಗಳಿಗೆ ಪ್ರವೇಶ

1157 (1590) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಓದಲು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳಕ್ಕೆ ಅನುಗುಣವಾಗಿ ಯಾವ ಅಗತ್ಯ ಕ್ರಮ ಕೈಗೊಳ್ಳಲಾಗಿದೆ? ವಿವರ ನೀಡುವುದು.

ಇ) ಇದಕ್ಕಾಗಿ ರಾಜ್ಯದಲ್ಲಿ ಹೊಸ ವೈದ್ಯ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ?

ಈ) ಇದ್ದಲ್ಲಿ, ಎಲ್ಲೆಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ? ಜಿಲ್ಲಾವಾರು ವಿವರ ಒದಗಿಸುವುದು.

ಉ) ಕೊಡಗು ಜಿಲ್ಲೆಯಲ್ಲಿ ಕಾಲೇಜು ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಊ) ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಡಾ॥ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು

ಆ) ಈ ಕಾರಣಕ್ಕಾಗಿ ಸರ್ಕಾರವು ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಉತ್ತೇಜನ ನೀಡುತ್ತದೆ. 2001-02ನೇ ಸಾಲಿನಲ್ಲಿ ಭಾರತ ಸರ್ಕಾರವು ರಾಜ್ಯದಲ್ಲಿ ಎರಡು

ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿದ್ದು, ಅದರಂತೆ, ಬಸವೇಶ್ವರ ವೈದ್ಯಕೀಯ ವಿದ್ಯಾಲಯ, ಚಿತ್ರದುರ್ಗ ಮತ್ತು ಎಂವಿಜೆ ವೈದ್ಯಕೀಯ ಮಹಾವಿದ್ಯಾಲಯ, ಬಿಂಗಳೂರು ಇಲ್ಲಿ ಪ್ರಾರಂಭವಾಗಿದೆ.

2202 ಮತ್ತು 2003ನೇ ಸಾಲಿನಲ್ಲಿ ಭಾರತ ಸರ್ಕಾರವು ಇನ್ನೊಂದು ವೈದ್ಯಕೀಯ ಕಾಲೇಜು ಸರ್ಕಾರವು ಇನ್ನೊಂದು ವೈದ್ಯಕೀಯ ಕಾಲೇಜು ಪ್ರಾರಂಭಿಸಲು ರಾಜ್ಯಕ್ಕೆ ಅನುಮತಿ ನೀಡಿದ್ದು ಅದರಂತೆ ಕೆ.ವಿ.ಜಿ. ವೈದ್ಯಕೀಯ ಕಾಲೇಜು, ಸುಳ್ಯ ಇಲ್ಲಿ ಪ್ರಾರಂಭವಾಗಿದೆ.

ಇ) ಹೌದು

ಈ) ಕರ್ನಾಟಕ ಸರ್ಕಾರವು ಅವಶ್ಯಕತಾ ಪ್ರಮಾಣಪತ್ರ ನೀಡಿರುವ ಪಟ್ಟಿ ಲಗತ್ತಿಸಿದೆ.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

LIST OF ESSENTIALLY CERTIFICATE ISSUED

ANNEXURE

Sl. No.	Name of the Institution	District (Places Proposed to start new Medical Colleges)
1	Vijaynagar Education Trust, Bangalore (Infant Jesus Medical College)	Bangalore Rural
2	Siddaganga Education Society, Tumkur	Tumkur
3	Sarjapura Basavlingamma Sanganagoud Patil Memorial Education Trust, Raichur	Raichur
4	Sri Dharmasthala Manjunatheshwara Education Trust, Ujire, D.K.	Dharwad
5	Basaveshwara Vidhyavardhaka Sangha, Bagalkot	Bagalkot
6	Adichunchanagiri Shikhshana Trust, Bellur (H.D. Devegowda Institute of Medical Sciences)	Hassan
7	Sahyadri Education Trust, Shimoga	Shimoga
8	Ambhram Charitable Trust, Bellur	KGF, Kolar
9	Novodaya Education Trust, Raichur	Raichur
10	Shanthivardhaka Education Trust, Balki	Bidar
11	Shasatra Sena Chikitsa Mahavidhyalaya (Vayusene) at Command Hospital, Bangalore	Bangalore
12	Kaginele Mahasamsthana Kanaka Guru Pita, Kaginele	Chikmagalore

1	2	3
13	Karnataka Adijambava Social & Education Trust, Bangalore	Bangalore
14	Government Medical College attached to Rajiv Gandhi University of Health Sciences, Bangalore	Bangalore
15	Bapuji Educational Association (S.S. Institute of Medical Sciences and Research) Davanagere	Davanagere
16	Srinaivasa Trust, Bangalore	Bangalore
17	Belimatt Mahasamsthana Socio-Cultural & Educational Trust, Bangalore	Nelamangala-Bangalore Rural
18	Children's Education Society, Bangalore	Bangalore
19	Sri Jagadguru Tontadarya Vidhya Pita, Gadag	Gadag
20	Laxmi Memorial Education Trust, Mangalore	Dakshina Kannada

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ

1158 (1591) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗದ ಉಪನ್ಯಾಸಕರ ಕೊರತೆ ಉಂಟಾಗಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ;

ಆ) ಎಲ್ಲೆಲ್ಲಿ ಈ ಅಭಾವ ಉಂಟಾಗಿದೆ; ಜಿಲ್ಲಾವಾರು ವಿವರ ನೀಡುವುದು;

ಇ) ವಿಜ್ಞಾನ ವಿಭಾಗದ ಯಾವ ಯಾವ ವಿಷಯಗಳಲ್ಲಿ ಉಪನ್ಯಾಸಕರ ಕೊರತೆ ಇದೆ; ಎಷ್ಟು ಹುದ್ದೆಗಳು ಖಾಲಿ ಇವೆ;

ಈ) ಇವುಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಬಿ. ಪರಮೇಶ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಅನುಬಂಧ - 1

ಇ) ಅನುಬಂಧ - 2

ಈ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1591 ಕ್ಕೆ ಸಂಬಂಧಿಸಿದಂತೆ, ಅನುಬಂಧ-1

ವಿಜ್ಞಾನ ವಿಭಾಗದ ಉಪನ್ಯಾಸಕರ ಅಭಾವ ಉಂಟಾಗಿರುವ ಜಿಲ್ಲಾವಾರು ವಿವರ

1) ಕೋಲಾರ

2) ಮೈಸೂರು

3) ಮಂಡ್ಯ